ಶ್ರೀ ನಿಂಗಪ್ಪ ಹೆಚ್ (ಕುಣಿಗಲ್)115(221)

ಮಾನ್ಯ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಸರ್ಕಾರದ ವತಿಯಿಂದ ಶಾಸಕರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಕಾರ್ಯಪಡೆಯು ಕೈಗತ್ತಿಕೊಂಡಿರುವ ಕುಡಿಯುವ ನೀರಿನ ಕಾಮಗಾರಿಗಳಿಗೆ ಪೂರ್ಣ ಹಣ ಮಂಜೂರು ಮಾಡದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ)ಬಂದಿದ್ದಲ್ಲಿ, ಯಾವ ಅವಧಿಯೊಳಗಾಗಿ ಹಣ ಬಿಡುಗಡೆ ಮಾಡಿ ಅಪೂರ್ಣಗೊಂಡಿರುವ ಕುಡಿಯುವ ನೀರಿನ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು,

ಇ) ಅವಶ್ಯಕ ಹಣ ಬಿಡುಗಡೆ ಮಾಡದೆ ಶಾಸಕರ ನೇತೃತ್ವದ ಕಾರ್ಯಪಡೆಯು ನಿಷ್ಕ್ರಿಯವಾಗಿದ್ದು ಅದನ್ನು ಮತ್ತೆ ಚಾಲ್ತಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಎಸ್ ಎ ರವೀಂದ್ರನಾಥ್

ಅ)ಬಂದಿದೆ

ಆ) ಈಗಾಗಲೇ ಅನುಷ್ಠಾನಗೊಳಿಸಿರುವ ತುರ್ತು ಕುಡಿಯುವ ನೀರಿನ/ ಟಾಸ್ಕ್ ಫೋರ್ಸ್ ಕಾಮಗಾರಿಗಳಿಗಾಗಿಯೇ ಬಾಕಿಯಿರುವ ರೂ 62 00 ಕೋಟಿಗಳ ಪೈಕಿ ರೂ 23 00 ಕೋಟಿಗಳನ್ನು ಏಪ್ರಿಲ್ 2007ರಲ್ಲಿ ಬಿಡುಗಡೆ ಮಾಡಲಾಗಿದೆ ಅಪೂರ್ಣಗೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಉಳಿದ ಅನುದಾನ 2007–08ರ ಸಾಲಿನಲ್ಲಿ ಬಿಡುಗಡೆಯಾಗಲಿದೆ

ಇ)ಶಾಸಕರ ನೇತೃತ್ವದ ಕಾರ್ಯಪಡೆ ನಿಷ್ಕ್ರಿಯವಾಗಿರುವುದಿಲ್ಲ ರಾಜ್ಯಾದ್ಯಂತ ತುರ್ತು ಕುಡಿಯುವ ನೀರಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ದೂರು ದಾಖಲಾದ 24 ತಾಸುಗಳೊಳಗೆ ಸ್ಥಳೀಯ ಅವಶ್ಯಕತೆಯನುಸಾರ ಸೂಕ್ತ ದುರಸ್ತಿ/ಪರಿಹಾರ ಕಾಮಗಾರಿಗಳನ್ನು ಆದ್ಯತೆ ಮೇಲೆ ಅನುಷ್ಠಾನ ಗೊಳಿಸಲು ತಾಲ್ಲೂಕು ಮಟ್ಟದ ನಿಯಂತ್ರಣ ಕೊರಡಿಗಳನ್ನು ತೆರೆಯಲಾಗಿದೆ 40 LPCD ಗಳಿಗಿಂತ ಕಡಿಮೆ ನೀರು ಪೂರೈಕೆಯಿರುವ ಎಲ್ಲಾ ಗ್ರಾಮೀಣ ಜನವಸತಿಗಳಿಗೂ ಸಮರ್ಪಕ ಕುಡಿಯುವ ನೀರು ಒದಗಿಸಲು ಸಮಗ್ರ ಕ್ರಿಯಾ ಯೋಜನೆಯನ್ನು ಸಹ ರೂಪಿಸಲಾಗುತ್ತಿದೆ

ಶ್ರೀ ನಿಂಗಪ್ಪ ಹೆಚ್ (ಎಂ ಎಲ್ ಎ)116(222)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

1) ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಕೊರತೆಯಿಂದಾಗಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

2) ಬಂದಿದ್ದಲ್ಲಿ ಯಾವ ಅವದೀಯೊಳಗೆ ಅವಶ್ಯಕ ಸಿಬ್ಬಂದಿಯನ್ನು ತುಂಬಿ ವಿದ್ಯಾರ್ಥಿಗಳ ಸಮಸ್ಯೆಯನ್ನು ಬಗೆಹರಿಸಲಾಗುವುದು?

ಶ್ರೀ ಎಸ್ ಬಸವರಾಜ ಹೊರಟ್ಟಿ

1) ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರ ಕೊರತೆಯಾದಂತೆಲ್ಲ ಪ್ರತಿ ಸಾಲಿನಲ್ಲೂ ಶಿಕ್ಷಕರ ನೇಮಕಾತಿಯನ್ನು ಮಾಡಲಾಗುತ್ತಿದೆ

ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇದ್ದ 8387 ಹುದ್ದೆಗಳಿಗೆ ದಿನಾಂಕ,11–01–2007 ರಂದು ಅಧಿಸೂಚನೆಯನ್ನು ನೀಡಿ ಸದರಿ ನೇಮಕಾತಿ ಪ್ರಕ್ರಿಯೆಯನ್ನು ಜೂನ್–2007ರಲ್ಲಿ ಪೂರ್ಣ ಗೊಳಿಸಲಾಗಿದೆ